ಹೆಣ್ಣುಮಕ್ಕಳಿದ್ದವರೆಲ್ಲರೂ ಇವರ ಮನೆಗೆ ಎಡತಾಕ ತೊಡಗಿದ್ದರು. ಅಮ್ಮನೆಲ್ಲಿಯಾದರೂ ಅಂಥವರೊಂದಿಗೆ, 'ಅಲ್ಲ ನೋಡಿ, ನಮ್ಮ ದೊಡ್ಡ ಮಗ ನಮ್ಮ ಆಸ್ತಿಯನ್ನೆಲ್ಲ ನೋಡಿಕೊಂಡು ಇಲ್ಲಿಯೇ ಇದ್ದಾನೆ... ಅವನಿಗಿನ್ನೂ ಮದುವೆಯಾಗಿಲ್ಲ' ಎನ್ನುವ ಮಾತನ್ನು ಹೇಳಿದರೆ ಕೇಳಿಸಿಕೊಂಡವರ ಮುಖ ನೋಡಬೇಕು. 'ತಮ್ಮ ಮಗಳನ್ನು ಈ ಮಗನಿಗೇ ಕೊಡಿ ಎಂದು ಕೇಳುತ್ತಿದ್ದಾಳೋ ಈ ಹೆಂಗಸು' ಎನ್ನುವ ಹೆದರಿಕೆಯಲ್ಲಿ ಮುಂದಿನ ಮಾತೇ ಆಡದೆ ಅಲ್ಲಿಂದ ತಲೆ ತಪ್ಪಿಸಿಕೊಂಡವರೂ ಇದ್ದರು. ಆಗೆಲ್ಲ ಇವನಿಗೆ ಅಮ್ಮ ತನ್ನ ಬಗ್ಗೆ ತೋರಿಸುತ್ತಿದ್ದ ಕಾಳಜಿಯ ಬಗ್ಗೆ ಸಂತೋಷ. ಆಕೆ ಪಡುತ್ತಿದ್ದ ಸಂಕಟ ನೋಡಿ ದುಃಖ. ಆದರೆ, ಅಪ್ಪ ಮಾತ್ರ ಅದಕ್ಕೆ ತದ್ವಿರುದ್ಧ. 'ಅಲ್ಲ, ಅಮೇರಿಕದಲ್ಲಿನ ಮಗನಿಗೆ ಹೆಣ್ಣು ಕೊಡುತ್ತೇವೆಂದು ಬಂದರೆ ಈ ಹಳ್ಳಿ ಗಮಾರನನ್ನು ತೋರಿಸಿ ಅವರನ್ನು ಹಾಗೆಯೇ ಕಳುಹಿಸಿ ಬಿಡುವುದೇ... ನಿನಗೇನಾದರೂ ಬುದ್ಧಿ ಇದೆಯಾ...' ಎಂದು ಬೈಯ್ಯುತ್ತಿದ್ದರು. ಅಮ್ಮನದ್ದು ಮಾತ್ರ ಒಂದೇ ಮಾತು, 'ಅಣ್ಣನಿಗೆ ಮದುವೆಯಾಗದೆ ತಮ್ಮನಿಗೆ ಹೇಗೆ ಮದುವೆ ಮಾಡುವುದು...'

ಅಪ್ಪ ಅದೇನೋ ಹೇಳುತ್ತಿದ್ದರು. ಹಾಗೆ ಅವರು ಹೇಳುತ್ತಿದ್ದ ಮಾತು ಸಮೀಪದಲ್ಲಿಯೇ ಇದ್ದರೂ ಇವನಿಗೆ ಕೇಳಿಸದಷ್ಟು ನಿಧಾನವಾಗಿರುತ್ತಿತ್ತು. ಆದರೆ, ಅಪ್ಪನ ಆ ಉತ್ತರದಿಂದಾಗಿ ಅಮ್ಮ ಗುಸು ಗುಸು ಅಳುತ್ತಿದ್ದುದು ಮಾತ್ರ ಇವನಿಗೆ ಗೊತ್ತಾಗುತ್ತಿತ್ತು. ಅಪ್ಪ ಆಚೆ ಹೋದ ಮೇಲೆ, 'ಅಪ್ಪ ಏನೆಂದರು ಅಮ್ಮ... ನೀ ಯಾಕೆ ಅಳುತ್ತಿದ್ದೆ...' ಎಂದು ಇವ ಕೇಳಿದರೂ ಅಮ್ಮ ಮುಖ ತಿರುಗಿಸುತ್ತಿದ್ದಳೇ ಹೊರತು ಉತ್ತರ ಕೊಡುತ್ತಿರಲಿಲ್ಲ. ಇವನೇ ಹೇಳುತ್ತಿದ್ದ. 'ಅಲ್ಲ ಅಮ್ಮ... ನನಗೆ ಮದುವೆಯೇ ಬೇಡ... ಹೀಗೆಯೇ ಇದ್ದು ಬಿಡುತ್ತೇನೆ...'

ತಮಾಷೆಗಾಗಿಯೇನಾದರೂ ಹೇಳುತ್ತಿದ್ದಾನೆಯೇ ಎಂದು ಆಕೆ ಇವನ ಮುಖ ನೋಡಿದರೆ ಅಲ್ಲಿ ತಮಾಷೆಯ ಕುರುಹೂ ಕಾಣಿಸುತ್ತಿರಲಿಲ್ಲ ಆಕೆಗೆ. ಕೆಲವೊಮ್ಮೆ ಆ ಮಾತುಗಳನ್ನು ಎಷ್ಟು ಗಟ್ಟಿಯಾಗಿ ಹೇಳುತ್ತಿದ್ದನೆಂದರೆ ಅಲ್ಲೇ ಎಲ್ಲೋ ಅಪ್ಪ ಇದ್ದರೆ ಅವರಿಗೂ ಕೇಳಿಸಬೇಕು ಹಾಗೆ.

ಆದರೆ, ಮತ್ತೆರಡೆ ತಿಂಗಳಿಗೆ ಆ ಅಪ್ಪನಿಗೆ, ಅಮ್ಮನಿಗೆ ಮತ್ತು ಇವನಿಗೂ ಸೇರಿ ಶಾಕ್ ಆಗುವಂತಹ ಸುದ್ದಿಯೊಂದು ಬಂದಿತ್ತು. ಅದು ಅಮೆರಿಕದಲ್ಲಿಂದ ಆ ಮಗ ಬರೆದ ಕಾಗದ. 'ನಾನು ಇಲ್ಲಿಯೇ ಮದುವೆ ಮಾಡಿಕೊಂಡಿದ್ದೇನೆ. ಹುಡುಗಿ ಆಂಧ್ರದವಳು, ನಮ್ಮ ಕಂಪೆನಿಯಲ್ಲಿಯೇ ನನ್ನ ಜೊತೆಗೇ ಕೆಲಸ ಮಾಡುತ್ತಿದ್ದಾಳೆ. ನಾವು ಕಾಲೇಜಿನಲ್ಲಿಯೂ ಒಟ್ಟಿಗೇ ಕಲಿಯುತ್ತಿದ್ದೆವು ಮತ್ತು ಅಮೆರಿಕಕ್ಕೆ ಬಂದದ್ದೂ ಒಟ್ಟಿಗೇನೇ...' ಎಂದು ಬರೆದಿದ್ದ.

ಅಪ್ಪ ಅಮ್ಮ ತಲೆ ಮೇಲೆ ಕೈ ಹೊತ್ತು ಕೂರುವುದೊಂದೇ ಬಾಕಿ. 'ಛೆ ಹೀಗೆ ಮಾಡಿಬಿಟ್ಟನಲ್ಲ ನನ್ನ ಮಗ' ಎನ್ನುತ್ತ ಅಪ್ಪ ಎರಡು ದಿನ ಸರಿಯಾಗಿ ಊಟವನ್ನೂ ಮಾಡಲಿಲ್ಲ. ಅಮ್ಮ ಊಟಕ್ಕೆ ಒತ್ತಾಯ ಮಾಡಿದರೆ ಪುನಃ ಅದೇ ಮಾತು. 'ನನ್ನ ಮಗ ಹೀಗೆ ಮಾಡಿಬಿಟ್ಟನಲ್ಲ. ಹೆಣ್ಣು ಕೊಡುತ್ತೇವೆ ಎಂದು ಎಷ್ಟೊಂದು ಜನ ಬರುತ್ತಿದ್ದಾರೆ. ಅವರಿಗೆಲ್ಲ ಏನು ಹೇಳುವುದು' ಅದಕ್ಕೆ ಅಮ್ಮನಲ್ಲಿ ಉತ್ತರವಿಲ್ಲ.

ಮನಸ್ಸಿನ ನೋವನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದ ಅಪ್ಪ ಮುಂದುವರಿಸುತ್ತಾರೆ. 'ಅವನ ಮೇಲೆ ಎಷ್ಟೊಂದು ನಂಬಿಕೆಯಿಟ್ಟಿದ್ದೆ. ಒಂದೇ ಏಟಿಗೆ ಎಲ್ಲವನ್ನೂ ಹಾಳು ಮಾಡಿಬಿಟ್ಟನಲ್ಲ. ಇಂತಹ ಮಕ್ಕಳು ಇದ್ದರೆಷ್ಟು ಬಿಟ್ಟರೆಷ್ಟು...' ಅಪ್ಪನ ಸಂಕಟವನ್ನು ನೋಡಿದ ಈ ಮಗನಿಗೆ ತಡೆಯಲಿಕ್ಕಾಗಲಿಲ್ಲ.

'ಇರಲಿ ಅಪ್ಪ. ಈಗ ಅಮೆರಿಕಕ್ಕೆ ಹೋಗುವ ಹೆಚ್ಚಿನ ಹುಡುಗರು ಮಾಡುವ ಕೆಲಸವೇ ಇಂತಹುದು. ಇವನದೇನೂ ವಿಶೇಷವಲ್ಲ. ಒಂದೇ ಎಂದರೆ ಅವ ನಮಗೆಲ್ಲ ಹೇಳಿ ಮಾಡಿಕೋಬಹುದಿತ್ತು. ಅವನ ಮೇಲೆ ಎಷ್ಟೊಂದು ನಂಬಿಕೆ ಮತ್ತು ಪ್ರೀತಿ ಇಟ್ಟಿದ್ದೆವು ನಾವೆಲ್ಲ' ಅಮ್ಮ ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿದ್ದಳು. ಅಷ್ಟರಲ್ಲಿ ಇವನೇ ಮುಂದುವರಿಸಿದ್ದ 'ಹೋಗಲಿ ಬಿಡಿ ಅಪ್ಪ. ಅಷ್ಟೆಲ್ಲ ಚಿಂತೆ ಯಾಕೆ ಮಾಡುತ್ತೀರ. ಅವನೇನು ಅಲ್ಲಿಯ ಹೆಣ್ಣನ್ನೇನೂ ಕಟ್ಟಿಕೊಳ್ಳಲಿಲ್ಲವಲ್ಲ. ಇಲ್ಲಿಯವಳೇ ತಾನೇ. ಇಬ್ಬರೂ ಕೆಲಸದಲ್ಲಿದ್ದಾರೆ ಅದೂ ಒಂದೇ ಕಂಪನಿಯಲ್ಲಿ. ಮತ್ತೇನು, ಹಾಗೆ ನಾನಿಲ್ಲವೇ ಇಲ್ಲಿ ನಿಮಗೆ...' ಈ ಮಗನ, 'ನಾನಿಲ್ಲವೇ ನಿಮಗೆ...' ಎನ್ನುವ ಕೊನೆಯ